ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (227) 97
ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.
ಉತ್ತರ ನೀಡಬೇಕಾದ ಸಚಿವರು : (ಶ್ರೀ ಹೆಚ್. ಹಾಲಪ್ಪ)
ಮಾನ್ಯ ಸಚಿವರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ಶಿರಾ ತಾಲ್ಲೂಕಿನಲ್ಲಿ ಪಡಿತರ ಅಂಗಡಿಗಳಿಗೆ ಸೀಮೆಎಣ್ಣೆಯನ್ನು ವಿತರಿಸುವಲ್ಲಿ ವಿತರಕರಿಂದ (Distributor) ಲೋಪದೋಷವಾಗಿದ್ದು ಸಾರ್ವಜನಿಕರಿಂದ ದೂರುಗಳೂ ಬಂದಿದ್ದರೂ ಸಹ ಇದುವರೆಗೂ ಯಾವುದೇ ಕ್ರಮ ಜರುಗಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಶಿರಾ ತಾಲ್ಲೂಕಿನಲ್ಲಿ ಸೀಮೆಎಣ್ಣೆ ಸಗಟು ವಿತರಕರು ವಿತರಿಸುವಲ್ಲಿ ಎಸಗಿರುವ ಲೋಪದೋಷಗಳ ಬಗ್ಗೆ ಕೆಲವು ನ್ಯಾಯಬೆಲೆ ಅಂಗಡಿ ದಾರರುಗಳಿಂದ ದೂರು ದಾಖಲಾಗಿದ್ದು ಅವುಗಳ ಬಗ್ಗೆ ಜಿಲ್ಲಾಧಿಕಾರಿಗಳ ನ್ಯಾಯಲಯದಲ್ಲಿ ಪ್ರಕರಣವನ್ನು ಇಡಲಾಗಿದೆ.
(ಆ)	ಹಾಗಿದ್ದಲ್ಲಿ ಅಂತಹವರ ಮೇಲೆ ಯಾವ ಕ್ರಮ ಜರುಗಿಸಲಾಗುವುದು?	ದೂರುಗಳು ವಿಚಾರಣಾ ಹಂತದಲ್ಲಿದ್ದು ಆರೋಪಗಳು ಸಾಬೀತಾದಲ್ಲಿ ಸಂಬಂಧಪಟ್ಟವರ ವಿರುದ್ಧ ಅಗತ್ಯ ವಸ್ತು ಕಾಯ್ದೆ 1955 ಮತ್ತು ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ.) ನಿಯಂತ್ರಣ ಆದೇಶ 1992 ರಡಿ ಕ್ರಮ ಕೈಗೊಳ್ಳಲಾಗುವುದು.